# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1130

2) ಮಾನ್ಯ ಸದಸ್ಯರ ಹೆಸರು : ಶ್ರೀ. ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 22.09.2022

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಸರ್ವಜ್ಞ ನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ-24 ರಲ್ಲಿನ ಡಾ॥ ಬಿ.ಆರ್.ಅಂಬೇಡ್ಕರ್ ಆಟದ ಮೈದಾನದಲ್ಲಿ ಸಹಾಯಕ ಪೊಲೀಸ್ ಆಯುಕ್ತರ ಕಛೇರಿಯನ್ನು ನಿರ್ಮಿಸಲಾಗಿದೆಯೇ ; ಇದ್ದಲ್ಲಿ ಸದರಿ ಕಟ್ಟಡವು ಯಾವ ದಿನಾಂಕದಂದು ಉದ್ಘಾಟನೆಯಾಗಿದೆ ಮತ್ತು ಪ್ರಸ್ತುತ ಯಾರ್ಯಾರು ಕೆಲಸ ನಿರ್ವಹಿಸುತ್ತಿದ್ದಾರೆ ; | ಸರ್ವಜ್ಞ ನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ-24 ರಲ್ಲಿನ ಡಾ॥ ಬಿ.ಆರ್.ಅಂಬೇಡ್ಕರ್ ಆಟದ ಮೈದಾನದಲ್ಲಿ ಸಹಾಯಕ ಪೊಲೀಸ್ ಆಯುಕ್ತರ ಕೆ.ಜಿ.ಹಳ್ಳಿ ಕಛೇರಿಯನ್ನು ಪೊಲೀಸ್ ಇಲಾಖಾ ವತಿಯಿಂದ ಕಟ್ಟಡ ನಿರ್ಮಿಸಲಾಗಿರುವುದಿಲ್ಲ.<br><br>ಸದರಿ ಕಟ್ಟಡವು ಪೊಲೀಸ್ ಇಲಾಖೆಗೆ ತಾತ್ಕಾಲಿಕವಾಗಿ ಉಪಯೋಗಿಸಲು ಜಿಲ್ಲಾ ಪಂಚಾಯತ್ ವತಿಯಿಂದ ನೀಡಲಾಗಿದೆ. |
| ಆ. | ಕಟ್ಟಡವನ್ನು ಯಾರ ಅನುಮತಿಯೊಂದಿಗೆ ಆಟದ ಮೈದಾನದಲ್ಲಿ ನಿರ್ಮಿಸಲಾಗಿದೆ ; ಅನುಮತಿಸಿರುವ ಪ್ರತಿ ನೀಡುವುದು ಮತ್ತು ಕಟ್ಟಡ ನಿರ್ಮಿಸಲು ಟೆಂಡರ್ ಕರೆಯಲಾಗಿದೆಯೇ ; (ಇದ್ದಲ್ಲಿ ಪ್ರಕಟವಾದ ಟೆಂಡರ್ ಜಾಹೀರಾತು ಪ್ರತಿ ಹಾಗೂ ಭಾಗಿಯಾದ ಗುತ್ತಿಗೆದಾರರ ವಿವರ ಮತ್ತು ಟೆಂಡರ್ ಪಡೆದ ಗುತ್ತಿಗೆದಾರರ ವಿವರಗಳನ್ನು ನೀಡುವುದು) | |
| ಇ. | ಕಟ್ಟಡವನ್ನು ನಿರ್ಮಿಸಲು ರೂಪಿಸಿರುವ ಅಂದಾಜುಪಟ್ಟಿ ಹಾಗೂ ಎಂ.ಬಿ ಪುಸ್ತಕ ಅನುಮತಿಸಿರುವ ಕಟ್ಟಡ ನಕ್ಷೆಯ ಪ್ರತಿ ಹಾಗೂ ಇಲಾಖೆಯಿಂದ ಅನುಮತಿಸಿರುವ ವಿವರಗಳ ದಾಖಲಾತಿಗಳನ್ನು ನೀಡುವುದು ; (ಖರ್ಚಾದ ಸರ್ಕಾರದ ಹಣ ಅಥವಾ ಕಟ್ಟಡ ನಿರ್ಮಿಸಲು ದಾನಿಗಳಿದ್ದಲ್ಲಿ ಅಥವಾ ಹಣ ಸಂಗ್ರಹಿಸಿದ್ದಲ್ಲಿ ಅವರುಗಳ ಹೆಸರು ಮತ್ತು ವೈಯಕ್ತಿಕವಾರು ಸಂಗ್ರಹವಾದ ವಿವರಗಳನ್ನು ನೀಡುವುದು) | |
| ಈ. | ಕಟ್ಟಡ ನಿರ್ಮಿಸಿರುವ ಜಮೀನಿನ ಸ್ವತ್ತಿನ ಸಂಖ್ಯೆ, ಮಾಲೀಕರ ಹೆಸರು, ಪಿಐಡಿ ಸಂಖ್ಯೆ, ಕಂದಾಯ ರಶೀದಿ, ಖಾತಾ ಪ್ರಮಾಣಪತ್ರದ ಪ್ರತಿಗಳನ್ನು ನೀಡುವುದು | |
| ಉ. | ಆಟದ ಮೈದಾನಕ್ಕೆ ಮೀಸಲಿಟ್ಟ ಜಾಗದಲ್ಲಿ ಯಾರ ಅನುಮತಿ ಪಡೆಯದೇ ಕಟ್ಟಡವನ್ನು ಅಕ್ರಮವಾಗಿ ನಿರ್ಮಿಸಲಾಗಿದೆಯೇ? ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದಿಲ್ಲವೇ; ತೊಂದರೆ ಇದ್ದಲ್ಲಿ ಇದನ್ನು ಸರಿಪಡಿಸಲು ಹಾಗೂ ಕಾರಣರಾದ ಅಧಿಕಾರಿಗಳ ವಿರುದ್ಧ ಈಗಾಗಲೇ ಕೈಗೊಂಡಿರುವ ಅಥವಾ ಕೈಗೊಳ್ಳುವ ಕ್ರಮಗಳ ಬಗ್ಗೆ ಮಾಹಿತಿ ನೀಡುವುದು ? | |

**ಸಂಖ್ಯೆ: ಹೆಚ್‌ಡಿ 88 ಪಿಬಿಎಲ್ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು